**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ-III, ರಾಯಚೂರು.**
**ಇವರ ನ್ಯಾಯಾಲಯದಲ್ಲಿ.**

**ಸಿ.ಸಿ .ನಂ.:14675/2021**
ಪಿ.ಡಬ್ಲ್ಯೂ :1

(ಈ ದಿವಸ ದಿನಾಂಕ 20-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು: ಶ್ರೀ ಎಮ್.ಎನ್. ಆರೋಪಿತನ ಪರ ವಕೀಲರಿಂದಃ**

1. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನಾನು ನಿ.ಪಿ.1 ರ ಫಿರ್ಯಾದನ್ನು ಬಜಾರದಲ್ಲಿ ಟೈಪ್ ಮಾಡಿಸಿರುತ್ತೇನೆ. ಫಿರ್ಯಾದನ್ನು ಬೆರಳಚ್ಚು ಮಾಡಿಸಲು ನಾನು ಮತ್ತು ಚಾಸಾ 10 ರವರು ಹೋಗಿರುತ್ತೇವೆ. ನಿ.ಪಿ.1 ರ ಆರೋಪಿತರ ವಿಳಾಸ ಎಂಬ ಬರವಣಿಗೆಯನ್ನು ಚಾಸಾ 4 ರವರು ಬರೆದಿರುತ್ತಾರೆ ಎಂದರೆ ಸರಿ, ನಮ್ಮ ಮನೆಗೆ 15-03-2017 ರಲ್ಲಿ ಗ್ಯಾಸ್ ಅಡುಗೆ ಅನಿಲ ಸಂಪರ್ಕವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿ. ನಾನು ಕೇಸ್ ಅನ್ನು ದಾಖಲಿಸುವಾಗ ವಿ.ಎಲ್.ಸಿ. ಫಾರ್ಮಸಿ ಮತ್ತು ಡೆಂಟಲ್ ಕಾಲೇಜಿಗೆ ಜವಾನರ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ. ಸೋಮವಾರಪೇಟೆಯಲ್ಲಿನ ಮಠಕ್ಕೂ ಸಹ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ.

2. ಆರೋಪಿತರು ನನ್ನ ಮೇಲೆ ದಾವಾ ನಂ.103/2021 ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆಯಜ್ಞೆಯನ್ನು ನಮ್ಮ ವಿರುದ್ಧ ನೀಡಲಾಗಿದೆ ಎಂದರೆ ಸಾಕ್ಷಿಯು ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ನ್ಯಾಯಾಲಯದ ತಡೆಯಜ್ಞೆಯನ್ನು ಉಲ್ಲಂಘನೆ ಮಾಡಿ ನಾನು ಆರೋಪಿಗಳ ಜಾಗದಲ್ಲಿ ಕಟ್ಟಡವನ್ನು ಕಟ್ಟಿರುತ್ತೇನೆ ಎಂದರೆ ಸರಿ, ಸಾಕ್ಷಿಯು ಆರೋಪಿಗಳ ಮನೆಯಲ್ಲಿ ದುಡಿದಿದ್ದರು ಸಹ ಯಾವುದೇ ಸಂಬಳವನ್ನು ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಈಗ ಕಟ್ಟಿರುವ ಕಟ್ಟಡದ ಅಕ್ಕ-ಪಕ್ಕದಲ್ಲಿ ಕುಲುಸುಂಬಿ ಅವರ ಮನೆ, ದರ್ಶನ್ ರವರ ಮನೆ, ಭೀಮರವರ ಮನೆ, ಪರಶುರಾಮ ರವರ ಮನೆ ಮತ್ತು ಸಾಯಿಸೀನಾ ಅವರ ಅಪಾರ್ಟ್‌ಮೆಂಟ್ ಇರುತ್ತದೆ ಎಂದರೆ ಸರಿ. ಅದೇ ರೀತಿ ಲೇಡಿಸ್ ಟೈಲರ್ ಅಂಗಡಿಗಳು ಮತ್ತು ಮೋಬೈಲ್ ಅಂಗಡಿಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಲ್ಪ ದೂರದಲ್ಲಿ ಇವೆ ಎಂದು ಹೇಳುತ್ತಾರೆ.

3. ನಾನು ಚಾಸಾ 4 ಮತ್ತು 5 ರವರ ಮೇಲೆ ಆರೋಪಿಗಳು ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ನಾನು ಮನೆಯಲ್ಲಿ ಗ್ಯಾಸ್ ಸಂಪರ್ಕ ಹೊಂದಿದ್ದರು ಸಹ, ನಾನು ಕಟ್ಟಿಗೆಯನ್ನು ತರಲು ಚಾಸಾ 5 ರವರ ಬಳಿ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಕಟ್ಟಿಗೆಯಿಂದ ಹೊಡಿಬಡಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಅವಾಚ್ಯ ಶಬ್ಧಗಳಿಂದ ಬೈದು, ಕೆಲಸಕ್ಕೆ ಬರಲಿಲ್ಲ ಎಂದರೆ ಜೋಪಡಿಯನ್ನು ಕಿತ್ತು ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಕೂದಲನ್ನು ಹಿಡಿದು ಎಳೆದಾಡಿ ಅಪಮಾನ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಹೊಡಿಬಡಿ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಹೊಡಿಬಡಿ ಮಾಡಿರುವುದಿಲ್ಲ, ನಾನು ಆಸ್ಪತ್ರೆಗೆ ಹೋಗಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಮತ್ತು ಸ್ಥಳ ಪಂಚನಾಮ ಕಾಲಕ್ಕೆ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ.

4. ಆರೋಪಿಗಳ ಆಸ್ತಿಯನ್ನು ಕಬಳಿಸಬೇಕೆಂದು ಈ ಸುಳ್ಳು ಕ್ರಿಮಿನಲ್ ಪ್ರಕರಣವನ್ನು ಚಾಸಾ 4 ಮತ್ತು 5 ರವರ ಜೊತೆ ಸೇರಿ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಸಹಿ/-
1–ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು **ಹಾಗೂ** 3 **ನೇ ಪ್ರ.ದ.ನ್ಯಾ.ದ.,**
ರಾಯಚೂ **ರು.**